# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## -:ವಾರ್ಡ್-42ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

ಎಂದಿನಂತೆ ದಿನಾಂಕ: 22.04.2022 ರಂದು ಬೆಳಿಗ್ಗೆ 10.30 ಗಂಟೆಗೆ ನೋಡೆಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್ ನಂ.42 ಲಕ್ಷ್ಮೀದೇವಿನಗರ, ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ಕಛೇರಿಯಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು ಈ ಕೆಳಕಂಡಂತಿರುತ್ತದೆ.

ಸಭೆಗೆ ಹಾಜರಿದ್ದ ಅಧಿಕಾರಿಗಳು:-

1. ಡಾ|| ಎಂ. ಜಿ. ಹಳ್ಳಿ ಶಿವರಾಮ್, ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು
2. ಡಾ. ಎನ್. ಶುಭ, ವೈದ್ಯಾಧಿಕಾರಿಗಳು, ಜೈ ಭುವನೇಶ್ವರಿನಗರ.
3. ಶ್ರೀಮತಿ. ನಿರ್ಮಲ, ಕಂದಾಯ ವಸೂಲಿಗಾರರು ಮತ್ತು ಕಾರ್ಯದರ್ಶಿಗಳು,
4. ಶ್ರೀ. ಸಿದ್ದರಾಜು, ಕಂದಾಯ ಪರಿವೀಕ್ಷಕರು ವಾರ್ಡ್ ನಂ.42.
5. ಶ್ರೀ. ಮಧುಸುಧನ್, ನೀರಿನ ಪರಿವೀಕ್ಷಕರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
6. ಶ್ರೀ. ನಾರಾಯಣ, ಹಿರಿಯ ಆರೋಗ್ಯ ಪರಿವೀಕ್ಷಕರು.
7. ಶ್ರೀ. ಕೆ. ಮಂಜುನಾಥ್, ಸಹಾಯಕ ಅಭಿಯಂತರರು, ವಾರ್ಡ್ ನಂ.42.
8. ಶ್ರೀ. ದೇವರಾಜು, ಮೇಲ್ವಿಚಾರಕರು, ವಾರ್ಡ್ ನಂ.42.
9. ನಾರಾಯಣಸ್ವಾಮಿ, ಮೇಲ್ವಿಚಾರಕರು
10. ಶ್ರೀಮತಿ. ಮಮತ, ಶುಶ್ರೂಷಕಿ, ನಂದಿನಿ ಲೇಔಟ್ ಆಸ್ಪತ್ರೆ.
11. ಶ್ರೀ. ನಾಗರಾಜು, ಸೂಪರ್‌ವೈಸರ್
12. ಶ್ರೀ. ಮುತ್ಯಾಲಪ್ಪ, ಸೂಪರ್‌ವೈಸರ್
13. ಶ್ರೀ. ಹರೀಶ್, ವಾರ್ಡ್ ಮಾರ್ಷಲ್.
14. ಶ್ರೀ. ರಾಕೇಶ್, ವಾಟರ್ ಮ್ಯಾನ್ ವಾರ್ಡ್ ನಂ.42.
15. ಶ್ರೀಮತಿ. ಸೆಲ್ವಿ ಮಹಿಳಾ ಅಧ್ಯಕ್ಷರು ಲಕ್ಷ್ಮಿದೇವಿನಗರ.
16. ಶ್ರೀಮತಿ. ನಳಿನಿ ಕಾವೇರಿನಗರ ಲಕ್ಷ್ಮಿದೇವಿನಗರ.
17. ಶ್ರೀ. ಚೇತನ್ ವಾರ್ಡ್ ಅಧ್ಯಕ್ಷರು, ಲಕ್ಷ್ಮಿದೇವಿನಗರ.

ವಾರ್ಡ್-42ರ ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳನ್ನು ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯು ಪ್ರಾರಂಭವಾಯಿತು.

ನೋಡಲ್ ಅಧಿಕಾರಿಗಳು ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಆರೋಗ್ಯಾಧಿಕಾರಿಯಾಗಿ ಹೊಸದಾಗಿ ಬಂದಿರುವ ಶ್ರೀಮತಿ. ಡಾ. ಎನ್. ಶುಭ ರವರನ್ನು ಪರಿಚಯಿಸಿಕೊಂಡು ನಂತರ ಸಭೆಗೆ ಪರಿಚಯಿಸಿದರು.

ನಂದಿನಿ ಬಡಾವಣೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕೋವಿಡ್ ಸಿಬ್ಬಂದಿಗಳನ್ನು ಬಿಡುಗಡೆಗೊಳಿಸಿರುವ ಬಗ್ಗೆ ವೈದ್ಯಾಧಿಕಾರಿಗಳು ನೋಡಲ್ ಅಧಿಕಾರಿಗಳಿಗೆ ತಿಳಿಸಿದರು. ಹಾಗೂ ಆಸ್ಪತ್ರೆ ರಸ್ತೆಯನ್ನು ಆದಷ್ಟು ಬೇಗ ಸರಿಪಡಿಸಲು ಕೋರಿದರು. ಜೊತೆಗೆ ಬೋರ್‌ವೆಲ್ ನೀರಿನ ಪೈಪ್‌ಗಳು ಹಾಳಾಗಿರುವುದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರಲು ಕೋರಿದರು.

**ಕ್ರಮ: ಆರೋಗ್ಯ ಇಲಾಖೆ (ರಾಜರಾಜೇಶ್ವರಿನಗರ ವಲಯ)**

ಅಧ್ಯಕ್ಷರು ಲಕ್ಷ್ಮಿದೇವಿನಗರ ವಾರ್ಡ್‌ನ ಸೂಪರ್‌ವೈಸರ್ ಆದ ಶ್ರೀ. ನಾರಾಯಣ ಸ್ವಾಮಿ ರವರಿಗೆ ಕಸದ ಸಮಸ್ಯೆಗಳ ಬಗ್ಗೆ ಹಾಗೂ ಬ್ಲಾಕ್ ಸ್ಪಾಟ್‌ಗಳ ಬಗ್ಗೆ ವಿಚಾರಿಸಿದರು. ಪ್ರತೀದಿನ ಮನೆ ಮನೆಗಳಿಗೆ ಕಸದ ಆಟೋಗಳು ಸರಿಯಾಗಿ ಕಸ ವಿಲೇವಾರಿ ಮಾಡುತ್ತಿರುವ ಬಗ್ಗೆ ತಿಳಿಸಿದರು.

ಬೀದಿ ದೀಪಗಳ ಸಮಸ್ಯೆ ಪರಿಹರಿಸಿರುವ ಬಗ್ಗೆ ಬೆಸ್ಕಾಂ ಅಧಿಕಾರಿಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಲಕ್ಷ್ಮಿದೇವಿನಗರ 6ನೇ ಅಡ್ಡರಸ್ತೆಯಲ್ಲಿ ಸ್ಯಾನಿಟರಿ ಲೈನ್ ದುರಸ್ಥಿಯಲ್ಲಿದ್ದು, ಅದನ್ನು ಸರಿಪಡಿಸಲು ಜಲಮಂಡಲಿ ಅಧಿಕಾರಿಗಳಿಗೆ ಅಧ್ಯಕ್ಷರು ಸೂಚಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ.ಡಬ್ಲ್ಯು.ಎಸ್.ಎಸ್.ಬಿ)**

ಹಲವಾರು ಇಲಾಖೆಗಳ ಅಧಿಕಾರಿಗಳು ವಾರ್ಡ್ ಕಮಿಟಿ ಸಭೆಗೆ ಗೈರು ಆಗಿರುವ ಬಗ್ಗೆ ಅಧ್ಯಕ್ಷರು ಸಂಬಂಧಪಟ್ಟ ಇಲಾಖೆಗಳಿಗೆ ವಿಷಯ ತಿಳಿಸಲು ಸೂಚಿಸಿದರು.

ಕಾರ್ಯದರ್ಶಿಗಳು ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿಗಳು ಅಧ್ಯಕ್ಷರು, ಸದಸ್ಯರು ಹಾಗೂ ಸಾರ್ವಜನಿಕರಿಗೆ ವಂದಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

(ಶ್ರೀಮತಿ. ನಿರ್ಮಲ)
ಕಂದಾಯ ವಸೂಲಿಗಾರರು
ಮತ್ತು ಕಾರ್ಯದರ್ಶಿ

(ಡಾ॥ ಎಂ. ಜಿ. ಹಳ್ಳಿ ಶಿವರಾಮ್) 21/4/22
ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು